Reg.No. M. 1550.
"KODAGU" MERCARA, (Coorg).

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೩ | ತಾರೀಕು ೯—೨—೧೯೪೫ನೇ ಶುಕ್ರವಾರ. | ಸಂಚಿಕೆ ೫೬

ಬರ್ಲಿನಿಗೆ ಗಂಡಾಂತರ?

ಲೇ:– 'ಗುಪ್ತ'

—()—

ಯೂರೋಪಿನ ಯುದ್ಧಕ್ಷೇತ್ರದಲ್ಲಿ ಬಿಸಿಯೇರುತ್ತಾ ನಡೆದಿದೆ. ರಷ್ಯನರು ಈ ಕಳೆದ ಎರಡು ವಾರಗಳಿಂದ ಕೈಕೊಂಡಿರುವ ಧಾಳಿ ಕ್ರಮವನ್ನು ನೋಡಿದರೆ ಅವರು ಈ ಭಾಗದ ಯುದ್ಧದ ಕಡೇ ಅಂಕದ ಅಭಿನಯಕ್ಕೆ ತೊಡಗಿದ್ದಾರೆಂದು ಹೇಳಬಹುದು. ಇವರ ಮುನ್ನಡೆಯು ಜರ್ಮನರಿಲ್ಲಾಗೆ ಗಾಬರಿಯನ್ನುಂಟುಮಾಡಿದೆ. ಅವರು ಜರ್ಮನಿಯ ಮುಖ್ಯ ನಗರವಾದ ಬರ್ಲಿನಿನಿಂದ ಕೇವಲ 36 ಮೈಲುಗಳ ದೂರದಲ್ಲಿರುವರೆಂದು ವಾರ್ತೆಬಂದಿದೆ. ನಗರದ ಹತ್ತಿರ ಬಂದಂತೆ ದಾರಿಯು ಕಷ್ಟವಾಗುತ್ತಾ ಬರುತ್ತಿರುವದೆಂದು ಹೇಳಲಾಗುತ್ತಿದೆ. ರಷ್ಯನ್ ಸೇನೆಗಳು ಅನೇಕ ಭಾಗಗಳಿಂದ ಮುಂದರಿಯತೊಡಗಿದ್ದಾರೆ. ಮಾರ್ಷಲ್ ಝುಕೋವ್‌ರವರು ಬಹು ಚಾಕಚಕ್ಯತೆಯಿಂದ ಸೈನ್ಯನಡೆಸತೊಡಗಿದ್ದಾರೆ ಇವರು ಮುನ್ನಡೆಯುತ್ತಿರುವ ಭೂಭಾಗವು ಯುದ್ಧಕ್ಕೆ ಸಹಾಯಕವಾಗಿಲ್ಲ. ಚಳಿಗಾಲ ಒಂದೆಡೆ, ಶೀತನೆಲ, ನೆರೆ ಇವುಗಳು ಅಲ್ಲಲ್ಲಿ ಅಡಚಣೆಯೂದರೂ ರಷ್ಯನರು ಇದನ್ನು ಪರಿಗಣಿಸದೆ ಮುಂದೆ ಸಾಗಿದ್ದಾರೆ. ಹವಾಗುಣವು ಶೀಘ್ರ ಬದಲಾಗುವ ಚಿಹ್ನೆಯಿರುವದರಿಂದ ಮುಂದೆ ಜರ್ಮನರು ರಷ್ಯನ್ ಮುನ್ನಡೆಯನ್ನು ತಡೆದು ನಿಲ್ಲಿಸಬಹುದೆಂದು ಅನೇಕ ತಜ್ಞರು ಅಭಿಪ್ರಾಯಪಡುತ್ತಾರೆ. ಈ ಮಧ್ಯೆ ತಾ. 30 ರಲ್ಲಿ ಹಿಟ್ಲರನ್ನು ತಾನು ಅಧಿಕಾರಕ್ಕೆ ಬಂದ 12 ನೇ ವಾರ್ಷಿಕೋತ್ಸವನದ ಸಂದರ್ಭದಲ್ಲಿ ಭಾಷಣಮಾಡತ್ತಾ ಹೀಗೆ ಹೇಳಿದನು. 'ಈಗ ನಾವು ಅನುಭವಿಸುತ್ತಿರುವ ಕಷ್ಟಗಳು ಸಧಾರಣವವು. ರಷ್ಯಾ ಪಡೆಭೂತವು ಜಯಶಾಲಿಯಾದರೆ ಮುಂದೆ ನಾವು ಪಡಬೇಕಾದ ಕಷ್ಟದ ಮುಂದೆ ಇದು ತೃಣಪ್ರಾಯವಾದುದು. ಅವರಿಂದಾಗಿ ಇಡೀ ಯೂರೋಪೇ ನಾಶವಾಗುವದು. 1933 ರಿಂದ ಜರ್ಮನಿಯು ಶಕ್ತಿಯಾ ಹಸ್ತವಿಂರಿ ಬೆಳೆಯುತ್ತಿದೆ. ಈ ಪ್ರತಿಭಟನಾಶಕ್ತಿಯಿಂದ ನಾವು ಜಯವನ್ನು ಪಡೆಯುದಿರಿವು. ನಮ್ಮ ಜೊತೆಯಲ್ಲಿರುವ ಯೂರೇ ಆಗಲೀ ನಮ್ಮ ಹಿನ್ನೆಲೆಯಲ್ಲಿ ನಿಂತು ನಮ್ಮನ್ನಿರಿಯುವದಾದರೆ ನಾವು ಬೆದರದೆ ವಿಜಯದ ಪಥಕ ಮುಂದರಿಯುವೆವು ಇದಿದನರಿಗೆ ಯೋಗ್ಯ ಪ್ರತೀಕಾರವನ್ನು ಮಾಡುವೆವು. ಯುದ್ಧದಲ್ಲಿ ಮಿತ್ರರು ಜಯಪಡೆಯರು. ಪಡೆವರೂ ರಷ್ಯಾತತ್ವವನ್ನು ಸಾಧಗೊಳಿಸಲಾರರು. ನಮ್ಮ ಶತ್ರುವು ಯಾವದೇ ರೀತಿಯ ನೀತಿಯನ್ನನುಸರಿಸಲಿ ಅದನ್ನು ಲೆಕ್ಕಿಸದೆ ಯುದ್ಧ ಮಾಡುವೆವು. ತನ್ನ ಇಡೀ ಜೀವಮಾನವನ್ನೆಲ್ಲಾ ತನ್ನ ಜನಾಂಗದ ಹಿತಕ್ಕಾಗಿ ಧಾರೆಯೆರೆದು ದುಡಿಯುತ್ತಿರುವ ಒಬ್ಬ ಮನುಷ್ಯನ ಶ್ರಮಕ್ಕೆ ದಯಾಮಯನಾದ ದೇವರು ತಕ್ಕ ಫಲಕೊಡದಿರಲಾರನು. ಆದ್ದರಿಂದ ಜರ್ಮನರೆಲ್ಲರೂ ಒಗ್ಗಟ್ಟಾಗಿ ತಮ್ಮ ರಾಷ್ಟ್ರದ ಹಿತಕ್ಕಾಗಿ ಯುದ್ಧ ಮಾಡಬೇಕು. ಶಕ್ತಿಮೀರಿ ದುಡಿಯಬೇಕು.' ಹಿಟ್ಲರನ ಭಾಷಣದ ಸಾರವನ್ನು ನೋಡಿದರೆ ಎರಡು ಅಭಿಪ್ರಾಯಗಳು ಎದ್ದು ತೋರುತ್ತವೆ. ಒಂದು ರಷ್ಯಾ, ಬ್ರಿಟನ್‌ಗಳೊಳಗೆ ತಿಕ್ಕಾಟ ತರುವ ಅಭಿಸ್ರಾಯ ಮತ್ತೊಂದು ತಾನು ಜರ್ಮನಿಯ ಅಭಿವೃದ್ಧಿಯನ್ನು ಮಾಡಿರುವೆನು; ಅದಕ್ಕೆ ದೇವರ ಬೆಂಬಲ ಅರ್ಥತ್ ಜಯದೊರೆಯುವದೆಂಬುದು. ಒಂದನೆಯ ವಿಚಾರವನ್ನು ಪರಿಶೀಲಿಸಿದರೆ ಹಿಟ್ಲರನಿಗೆ ಸಫಲತೆದೊರೆಯುವದು ದೂರದ ಮಾತು. ರಷ್ಯನರು ನೇರವಾಗಿ ಬರ್ಲಿನಿಗೆ ಸಾಗುತ್ತಿರುವಾಗ ಈ ಮಾತಿನ ಪ್ರಯೋಜನ ಹೆಚ್ಚಿಲ್ಲ. ಒಂದು ವೇಳೆ ಬ್ರಿಟನ್ ರಷ್ಯಗಳೊಡನೆ ಮುಂದೆ ಘರ್ಷಣೆಬಂದರೂ ಹಿಟ್ಲರನಿಗೆ ಲಾಭವಾಗುವ ಹಾಗೆ ಕಾಣುವದಿಲ್ಲ. ರಷ್ಯನರು ಬರ್ಲಿನಿನ ಮೇಲೇರಿ ಬಾರದಿರದು. 'ನಮಗೆ ಜಯವು ದೊರೆಯದಿರದು' ಎಂಬ ಆತನ ಎಡನೇ ನಂಬಿಕೆಯು ಅಶಾದಾಯಕವಾಗಿ ಕಂಡುಬರುವದಿಲ್ಲ. ಹಿಟ್ಲರನ ಭಾಷಣದಿಂದ ಆತನಲ್ಲಿ ಪೌರುಷವಿದೆ, ಕಚ್ಚಿದೆ, ಧೃತಿಯಿದೆ ಎಂಬುದು ಕಂಡಬಂದರೂ ಅವರಿಗೆ ವಿಜಯದೊರೆತೀತೆಂಬುದಕ್ಕೆ ಈಗ ನನಗೆ ಕೊಡಲ್ಪಡುತ್ತಿರುವ ವಾರ್ತೆಗಳು ಸಮರ್ಥಕವಾಗಿಲ್ಲ ನನ್ನ ವಾರ್ತೆಗಳು ನಿಜವಿದ್ದರೆ ಹಿಟ್ಲರನು ಬರುವ ಎರಡು ವಾರಗಳಲ್ಲಿ ಜರ್ಮನಿ ಬಿಟ್ಟೋಡಬೇಕು; ಯಾ ರಣರಂಗದಲ್ಲಿ ಮಡಿಯಬೇಕು. ಇಲ್ಲವೇ ತಲೆಕೆಟ್ಟು ಹುಚ್ಚನಾಗಬೇಕು. ಇಂಥಾ ಪರಿಸ್ಥಿತಿ ಜರ್ಮನಿಗೆ ಬಂದಿದೆಯೆಂಬುದನ್ನು ಈಗಿನ ವಾರ್ತೆಗಳು ತೋರಿಸುತ್ತವೆ. ಆದರೆ ಹಿಟ್ಲರನ ಭಾಷಣದ ಧಾಟಿಯು ಹಿಮ್ಮೆಟ್ಟಕೊಡಗಿರುವವನ ಮಾತಿನಂತಿಲ್ಲ. ಇರಲಿ, ಜರ್ಮನಿಗೆ ಗಂಡಾಂತರ ದಿನೇ ದಿನೇ ಸನ್ನಿಹಿತವಾಗುತ್ತಿದೆ. ರಂಡ್‌ಸ್ಟಟನೇನೋ ಪರಿಸ್ಥಿತಿಯದೆಲ್ಲಿ ಬಹು ಪ್ರಯಾಸದಿಂದ ಹೋರಾಡಿದರೂ ಪ್ರಯೋಜನವಾಗುತ್ತಿಲ್ಲ. ಮುನ್ನಡೆದ ಜರ್ಮನರನ್ನು ಹಿಮ್ಮೆಟ್ಟಿಸಿ ಬೆಲಿಯನ್ನು ಮಿತ್ರರು ಮುಕ್ತಗೊಳಿಸಿರುವರಂತೆ.

ಈ ಮಧ್ಯೆ ಮಿತ್ರರಾಷ್ಟ್ರದ ಮಹಾ ಮುಖ್ಯರಾದ ಮೂರು ಜನರ (ಪೊದಲು ನಾಲ್ಕು ಜನರಿದ್ದರು. ಆದರೆ ಧಿನ ಕಳೆದಂತೆ ದಂತೆ ಚೀನಾದ ಚಿಯಂಗ್ ಕೈಶೆಕರ ಹೆಸರು ಈ ಶ್ರೀಮಂತರ್ಕಗಳ ಪಟ್ಟಿಯಿಂದ ಮಾಯವಾಗತೊಡಗಿದೆ!) ರೂಸ್ವೆಲ್ಟ, ಚರ್ಚಿಲ್, ಸ್ಟಾಲಿನ–ಭೇಟಿಯು ರಷ್ಯಾದ ಯಾವದೋ ಸ್ಥಳದಲ್ಲಿ ನಡೆಯುತ್ತಿರುವದಾಗಿ ತಿಳಿಯಬಂದಿದೆ. ಈ ಮಿಟಿಂಗಿನಲ್ಲಿ ಯಾವ ವಿಚಾರಗಳನ್ನು ಚರ್ಚಿಸುವರೋ ತಿಳಿದುಬಂದಿಲ್ಲ.

ಈ ಮಧ್ಯೆ ಪೂರ್ವಭಾಗದಿಂದ ಶುಭವಾರ್ತೆಗಳು ಬಂದಿವೆ. ಫಿಲಿಪೈನಿನಲ್ಲಾಗುತ್ತಿರುವ ಕದನವು ಭೀಕರರೂಪತಾಳುತ್ತಿದೆ. ಇದೀಗ ಫಿಲಿಪೈನಿನ ಮುಖ್ಯನಗರವಾದ ಮನಿಲ್ಲಾವು ಜನರಲ್ ಮೆಕಾರ್ಥರವರ ಕೈವಶವಾಗಿದೆ. ಜಪಾನರ ಯುದ್ಧ ಚಟುವಟಿಕೆಯ ವಿಷಯ ಹೆಚ್ಚಿನ ವರದಿಗಳೇನೂ ಬಂದಿರುವದಿಲ್ಲ.

ಬರ್ಮಾಗಡಿಯಲ್ಲಿ ಮಿತ್ರರ ಟ್ಯಾಂಕುಗಳು ಇರಾವತಿ ನದಿಯನ್ನು ದಾಟಿ ಮುಂದೆ ಸಾಗಿವೆ. ಜಪಾನ್ ಪ್ರತಿಭಟನೆ ಜೋರಾಗಿಲ್ಲ. ಬರ್ಮಾದಲ್ಲಿ ಜಪಾನರು ಹೊಸ ಸರಕಾರವನ್ನು ಸ್ಥಾಪಿಸಿರುವರು. ಹಿಂದಿನ ಸರಕಾರವನ್ನು ತೆಗೆದುಹಾಕಿದ್ದಾರೆ.

ಹಿಂದೀ ಸಮಸ್ಯೆಯ ಪರಿಹಾರ.

ಲೇ:– 'ವಸು'

ಹಿಂದೂಸ್ಥಾನದ ರಾಜಕೀಯ ಸಮಸ್ಯೆಯು ಬಂದು ಗೊಂಡಾರಣ್ಯವಾಗಿ ಅದನ್ನು ಪರಿಶೀಲಿಸಿತೊಡರನ್ನು ಬಿಡಿಸಲು ನುಗ್ಗಿದವರೆಲ್ಲರೂ ದಾರಿಕಾಣದವರಾಗುತ್ತಿರುವದು ವಿಷಾದದ ಸಂಗತಿ. ಅನೇಕರು ಹಿಂದೂಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಪಟ್ಟರು. ಅನೇಕರು ಪ್ರಯತ್ನಪಡುತ್ತಿದ್ದಾರೆ. ಆದರೆ ಯಾವದೂ ಸಫಲವಾಗಿಲ್ಲ. ಯಾಕೆ? ಸಮಸ್ಯೆಯನ್ನು ಬಗೆಹರಿಸಲು ಉದ್ಯುಕ್ತರಾದ ಮಹನೀಯರ ಆಶಕ್ತಿಯಲ್ಲ; ಇವರ ಪ್ರಯತ್ನಗಳನ್ನೆಲ್ಲಾ ಮಣ್ಣುಗೂಡಿಸುವ ಶಕ್ತಿಯೊಂದು ಈ ರಾಜಕೀಯ ಅರಣ್ಯದಲ್ಲಿ ಸಂಚರಿಸುತ್ತಿದೆ. ಈ ಪೈಶಾಚಿಕ ಶಕ್ತಿಯ ಅರಿವು ಭಾರತೀಯರಿಗೆ ನೊದಲೇ ಆಗಿದೆ. ಆದರಲ್ಲೂ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಇದನ್ನು ಚೆನ್ನಾಗಿ ತಿಳಿದು ಆ ಶಕ್ತಿಯನ್ನು 'ಇಲ್ಲಿಂದ ತೊಲಗಿರಿ' ಎಂದು ಉದ್ದೇಶಿಸಿ ನುಡಿಯಿತು. ಈ ಗೊಂಡಾರಣ್ಯದಲ್ಲಿ ಒಂದು ತಿಳಿವಿನ ಬೆಳಕಾಗಿ, ನೆಲವಿನ ನಾಡಿಯಾಗಿ, ಚೈತನ್ಯದ ಚಿಲುಮೆಯಾಗಿರುವ ವ್ಯಕ್ತಿ ಮಹಾತ್ಮ ಗಾಂಧೀಜಿಯವರು ಮೊನ್ನೆಯಾಗಿ ಪುನಹ ಕಾಂಗ್ರೆಸಿನ 'ಬ್ರಿಟಿಷರೇ, ದೇಶಬಿಟ್ಟು ತೊಲಗಿರಿ' ಬಂಬ ನಿರ್ಣಯದ ಅರ್ಥವನ್ನು ವಿಷದಪಡಿಸಿದರು. 'ಹಿಂದೂದೇಶದಲ್ಲಿ ಬ್ರಿಟಿಷರು ಯಾ ಮತ್ತಾವ ಜನಾಂಗದವರು ಇರಲು ಭಾರತೀಯರ ಆತಂಕವಿಲ್ಲ. ಆದರೆ ಅವರು ಸ್ನೇಹಿತರಂತೆ ಇರಬಹುದೇ ವಿನಹ ಯಜಮಾನರಂತಲ್ಲ' ಅಂದರೆ ಬ್ರಿಟಿಷರ ಅಧಿಕಾರ ಭಾರತದಿಂದ ತೊಲಗಬೇಕು. ಈ ಅಧಿಕಾರವೇ ಹಿಂದೀ ಸಮಸ್ಯೆಯ ಉತ್ತರಕ್ಕೆ ತೊಡರಾಗಿದೆ.

ಭೂಲಾಬಾಯಿ ದೇಸಾಯಿಯವರ್ತುಮುಸ್ಲಿಂಲೀಗಿನ ಕಾರ್ಯದರ್ಶಿಗಳಾದ ಲಿಯೂಖತ್ ಅಲಿಖಾನರನ್ನು ಕಂಡು ಮಾತಾಡಿ ಕೇಂದ್ರದಲ್ಲಿ ಸಮ್ಮಿಶ್ರ ಮಂತ್ರಿಮಂಡಲವನ್ನು ರಚಿಸುವ ವಿಚಾರದಲ್ಲಿ ಇಬ್ಬರಲ್ಲಿ ಒಪ್ಪಂದವಾಗಿದೆಯೆಂದೂ, ಆದ ಕಾರಣಕ್ಕೇ ಭೂಲಾಭಾಯಿಯವರು ವೈಸರಾಯರನ್ನು, ಮಹಾತ್ಮರನ್ನು ಕಂಡರು; ಪುನಹ ವೈಸರಾಯರನ್ನು ಕಾಣಲಿರುವರಿಂದು ವಾರ್ತೆಗಳು ಪ್ರಕಟವಾಗಿದ್ದವು. ಆದರೆ ಇದೀಗ ನಮ್ಮೊಡನೆ ಯಾವ ಒಪ್ಪಂದವೂ ಆಗಿಲ್ಲವೆಂದು ಲಿಯೂಖತ್ ಅಲಿಖಾನರು ಹೇಳಿದ್ದಾರೆ. ಭೂಲಾಭಾಯಿಯವರ ಪ್ರಯತ್ನವು ಮಾತ್ರ ಇದರಿಂದ ನಿಲ್ಲಲಿಲ್ಲ. ಅವರು ವೈಸರಾಯರನ್ನು ಕಾಣಲಿರುವರಂತೆ.

ಲಾರ್ಡ್ ವೇವೆಲ್ಲರು ಹಿಂದೂಸ್ಥಾನಕ್ಕೆ ಬಂದಾಗ ಅವರು ಹಿಂದೀ ಸಮಸ್ಯೆಯನ್ನು ಬಗೆಹರಿಸಬಹುದೆಂದು ಹಲವರಲ್ಲಿ ನಂಬಿಕೆಯಿತ್ತು. ಆದರೆ ಅವರೂ ಸಹ ತಮ್ಮ ಹಿಂದಿನ ವೈಸರಾಯರು ಸುತ್ತುತ್ತಿದ್ದ ಪಥದಲ್ಲಿಯೇ ತಿರುಗುತ್ತಿರುವರೆನ್ನಬಹುದು. ಇವರು ಬಂದೊಡನೆಯೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರ ಬಿಡಗಡೆಯಾಗಿ ರಾಷ್ಟ್ರೀಯ ಕಗ್ಗಂಟನ್ನು ಪರಿಹರಿಸಲು ಸಹಾಯ ಮಾಡುವರೆಂದು ಊಹಿಸಲಾಗಿತ್ತು. ಆದರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜೈಲೊಳಗೆ ಮುಚ್ಚಲ್ಪಟ್ಟು ಎರಡುವರೆ ವರ್ಷಗಳಾದರೂ ಅವರ ಬಿಡುಗಡೆಯಚಿಹ್ನೆ ಇನ್ನೂ ಕಂಡುಬರುವದಿಲ್ಲ, ಬದಲು ಕಾಂಗ್ರೆಸ್ಸನ್ನು ಬಗ್ಗು ಬಡಿಯುವ ಮನೋಭಾವವೇ ಕಂಡುಬರುತ್ತಿದೆ. ಮೊನ್ನೆ ಮೊನ್ನೆಯಾಗಿ ಬೀಹಾರಿನ ಮೂಜಿಮುಖ್ಯ ಮಂತ್ರಿ ಶ್ರೀ ಕೃಷ್ಣ ಸಿನ್ಹಾ ಮತ್ತಿತರ ಕೆಲವರನ್ನು ಅವರವರ ಮನೆಯಲ್ಲಿಯೇ ದಸ್ತಗಿರಿ ಮಾಡಿಡುವ ಆಜ್ಞೆಯನ್ನು ಮಾಡಲಾಗಿತ್ತು. ಅವರು ಪುನಹ 1942ರ ಆಗಸ್ಟಿನಂಥಾ ಮತ್ತೊಂದು ಚಳವಳಿಕ್ಕೆ ತಯಾರಿಮಾಡುತ್ತಿರುವರೆಂಬ ಭಯ ಸರಕಾರಕ್ಕೆ ಆಯಿತಂತೆ! ಕಳೆದ ತಾ. 26 ರ ದಿನದ ಘಟನೆಯನ್ನೇ ಅವಲೋಕಿಸಿರಿ. ಎಲ್ಲಾ ಭಾಗಗಳ ವರದಿಗಳು ದೊರೆಯದಿದ್ದರೂ ದೊರೆತವುಗಳನ್ನು ಪರಿಶೀಲಿಸಿದರೆ ಸರಕಾರವು ಕಾಂಗ್ರೆಸಿನ ಸೊಲ್ಲಡಗಿಸಲು ಕಂಕಣಬದ್ಧವಾಗಿದೆಯೆಂಬುದು ವೇದ್ಯವಾಗದಿರದು. ಸರಕಾರದೊಡನೆ ಘರ್ಷಣೆತಂದುಕೊಳ್ಳಬಾರದೆಂದು ಗಾಂಧೀಜಿಯವರ ಸೂಚಿಸಿದ್ದರು. ಜನತೆಯೂ ಸಹ ಆ ತಿಸ್ತಿನಂತೆ ವರ್ತಿಸಿತು. ಪ್ರತಿಯೊಂದು ಹಿಂದೀ ಗೃಹವೂ ರಾಷ್ಟ್ರೀಯ ದಿನಾಚರಣೆಯ ರಂಗವಾಗಿ ಪರಿಣಮಿಸಿತು. ಆದರೂ ಕೆಲವು ಕಡೆ ಅಧಿಕಾರಿಗಳ ಘರ್ಷಣೆ ತಪ್ಪಲಿಲ್ಲ. ಅಹಮದಾಬಾದ್, ಕರಾಚಿ ಮೊದಲಾದೆಡೆ ಕಾಂಗ್ರೆಸಿಗರ ದಸ್ತಗಿರಿಗಳಾದವು. ಆಂದರೆ ಸರಕಾರದ ಹೃದಯ ಪರಿವರ್ತನೆಯೇಗಲಿಲ್ಲ. ಭಾರತ ಸಮಸ್ಯೆಯನ್ನು ಬಿಡಿಸುವ ಇಚ್ಛೆ ಅದಕ್ಕಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಆದರೆ ಸತ್ಯವು ಎಂದೂ ಸತ್ಯವಾದುದು. ಅಸತ್ಯ, ಮೋಸಗಳಿಂದ ಆದನ್ನು ಕೆಲವು ಕಾಲ ಬಚ್ಚಿಡಬಹುದು. ಆದರೆ ಸದಾಕಾಲ ಅದನ್ನು ಬಚ್ಚಿಡಲು ಯಾರಿಗೂ ಸಾಧ್ಯವಿಲ್ಲ. ಸರಕಾರವು ಹಿಂದೂದೇಶೀಯರ ನ್ಯಾಯಬದ್ಧ ಕೇಳಿಕೆಯನ್ನು ಹತ್ತಿಕ್ಕಿ, ನಾನಾ ರೀತಿಯ ತಿರುಕುಳವನ್ನು ಕೊಟ್ಟು ಬಹಿರ್ಜಗತ್ತಿಗೆ ಉತ್ತಮ ಉಪದೇಶವನ್ನು ಸಾರುತ್ತಾ ತಮ್ಮ ಇಲ್ಲಿಯ ಕೃತಿಯ ಬಗ್ಗೆ ಅವರ ಕಣ್ಣಿಗೆ ಮಣ್ಣೆರಚಲೆತ್ನಿಸುತ್ತಿದ್ದರೂ ಕ್ರಮೇಣ ಜಗತ್ತು ಬ್ರಿಟಿಷರ ಈ ನೀತಿಯ ಬಗ್ಗೆ ಜಾಗೃತವಾಗುತ್ತಿದೆ. ಹಿಂದೂದೇಶದಲ್ಲಿ ಬ್ರಿಟಿಷ್ ಸರಕಾರವು ನಡೆಸುತ್ತಿರುವ ಶಾಸನಗಳ ಅಂಧಆಡಳಿತವು ಹಲವಾರು ರಾಷ್ಟ್ರಗಳ ಕಣ್ತೆರೆಯಿಸಿದೆ. ಯದ್ಧದ ಈ ಸಂದರ್ಭದಲ್ಲಿ ಯಾವದೇ ಗತ್ಯಂತರವಿಲ್ಲದೆ ಕಾರ್ಯಕ್ರಮವು ಬೇಡ; ವಿಧಾಯಕ್ಕ ಕಾರ್ಯಕ್ರಮವನ್ನೇ ಮುನ್ನಡೆಸುವಾ ಎಂದು ಅಹಿಂಸಾವಾದಿ ಮಹಾತ್ಮರು ನುಡಿಯುತ್ತಿದ್ದರೂ ಹಿಂದೀ ಸಮಸ್ಯೆಯನ್ನು ಸಣ್ಣ ಪ್ರಶ್ನೆಯೆಂದು ತಾತ್ಸಾರಮಾಡುವದು ಜಗತ್ತಿನ ಇತರ ರಾಷ್ಟ್ರಗಳಿಗೆ ಇಂದು ಸಾಧ್ಯವಿಲ್ಲ. ಹಿಂದೂಸಮಸ್ಯೆಯು ಯೋಗ್ಯರೀತಿ ಬಗೆಹರಿಸಲ್ಪಡದಿದ್ದರೆ ಜಗತ್ತಿನ ಶಾಂತಿಗೆ, ಸ್ವಾತಂತ್ರ್ಯಕ್ಕೆ ಅಪಾಯವಿದೆಯೆಂಬುದು ಎಲ್ಲಾ ರಾಷ್ಟ್ರಗಳಿಗೂ ತಿಳಿದಿದೆ. ಆದ್ದರಿಂದಲೇ ಅಮೇರಿಕಾದಿಂದ, ಮಾಸ್ಕೊದಿಂದ ಚೈನಾದಿಂದ, 'ಹಿಂದೂದೇಶದ ಭವಿಷ್ಯವೇನು?' ಎಂಬ ಪ್ರಶ್ನೆ ಎದ್ದಿದೆ. ಜಗತ್ತಿನ ಎಲ್ಲಾ ಸ್ವಾತಂತ್ರ್ಯಪ್ರೇಮಿ ಜನತಾಂಗಗಳು ಕೇಳಬೇಕಾದ ಪ್ರಶ್ನೆಯಿದು. ಈ ಪ್ರಶ್ನೆಯನ್ನು ಹೊರಗಿನ ರಾಷ್ಟ್ರಗಳು ಹೇಗೆ ಕೇಳುತ್ತಿರುವವೋ ಹಾಗೆಯೇ ಪ್ರತಿಯೊಬ್ಬ ಭಾರತೀಯನೂ ತನ್ನನ್ನು ತಾನು ಕೇಳಿಕೊಳ್ಳಬೇಕು. ಸ್ವಾತಂತ್ರ್ಯವು ಮತ್ತೊಬ್ಬರಿಂದ ದಾನದ ರೂಪವಾಗಿ ದೊರೆಯುವ ವಸ್ತುವಲ್ಲ. ನಾವೇ ತೆಗೆದುಕೊಳ್ಳಬೇಕಾದ ವಸ್ತು. ಈ ದೃಷ್ಟಿಯಿಂದಲೇ ಕಳೆದ ತಾ. 26 ರಂದು ಇಡೀ ಭಾರತೀಯರು, 'ಸ್ವರಾಜ್ಯ ಕರಗತವಾಗುವ ವರೆಗೆ ನಮ್ಮ ಸಂಗ್ರಾಮವನ್ನು, ಏನೇ ತೊಡರುಗಳು ಬಂದರೂ ಲೆಕ್ಕಿಸದೆ ಮುಂದೆ ಸಾಗಿಸುವೆವು' ಎಂದು ಪ್ರತಿಜ್ಞೆ ತೆಗೆದುಕೊಂಡದ್ದಾಗಿದೆ. ಈ ದೃಷ್ಟಿಯಿಂದ ನಾವು ಮುನ್ನಡೆಯಬೇಕು ಹಾಗೆ ಮುನ್ನಡೆಯುವದೆಂದರೆ ವಿಧಾಯಕ ಕಾರ್ಯಕ್ರಮವರ್ತಕರಾಗುವದು.

ಕೊ ಡ ಗು

ತಾ. ೯-೨-೧೯೪೫ನೇ ಶುಕ್ರವಾರ

ಕೆಲಸಗಾರರು ಮುಂದೆ ಬರಬೇಕು.

ಅಖಿಲ ಭಾರತ ಕಾಂಗ್ರೆಸಿನ ಆಶ್ರಯದಲ್ಲಿ ಮೂದರಿ ಗ್ರಾಮಗಳನ್ನು ರಚಿಸುವ ಕಾರ್ಯಕ್ರಮವು ಜಾರಿಗೆ ಹಲವೆಡೆ ಬಂದಿದೆ. ಇದಕ್ಕೆ ಬೇಕಾದ ಒಂದು ಲಕ್ಷ ಕೆಲಸಗಾರರನ್ನು ತರಬೇತು ಮಾಡುವ ಯೋಜನೆಯೂದರೂ ಬರುವ ಏಪ್ರಿಲ್ ತಿಂಗಳಿಂದ ಪ್ರಾರಂಭವಾಗಲಿದೆ. ಭರತ ಖಂಡದಂಥಾ ಹಳ್ಳಿಗರ ನಾಡಿನಲ್ಲಿ ಹಳ್ಳಿಗಳ ಉದ್ಧಾರವೇ ರಾಷ್ಟ್ರದ ಉದ್ಧಾರ. ಹಳ್ಳಿಗಳೇ ರಾಷ್ಟ್ರದ ಜೀವನಾಡಿಗಳು ಈ ನಾಡಿಗಳಲ್ಲಿ ಪರಿಶುದ್ಧ ರಕ್ತ ಸಂಚರಿಸುವಂತಾದರೆ ಅರ್ಥಾತ್ ಹಳ್ಳಿಗಳ ಉದ್ಧಾರವಾದರೆ ನಾಡಿನ ದೇವತೆ ಭಾರತಾಂಬೆಯು ನಗುಮುಖದಿಂದ ನಲಿಯುವಳು, ಎಂಬುದರಲ್ಲಿ ಎರಡಭಿಪ್ರಾಯಗಳಿಲ್ಲ. ಆದರೆ ಯಾವ ಯೋಜನೆಯು ಯಶಸ್ವಿಯಾಗಬೇಕಾದರೂ ಅದಕ್ಕೆ ತಕ್ಕ ಕಾರ್ಯಕರ್ತರು ಬೇಕು. ಹಿಂದೂದೇಶದ ಆದ್ಯಂತಕ್ಕೂ ಜನತೆಯು ಮಹಾತ್ಮರ ಅಣತಿಯಂತೆ ವಿಧಾಯಕವಾದ ಈ ಗ್ರಾಮಪುನರುಜ್ಜೀವನ ಕಾರ್ಯಕ್ಕೆ ಕೈಹಾಕಕೊಡಗಿದೆ. ಅದಕ್ಕಾಗಿ ಬೇಕಾದ ಕೆಲಸಗಾರರ ತರಬೇತಿನ ಏರ್ಪಾಡು ಮಾಡತೊಡಗಿದೆ. ಈ ಕಾರ್ಯದಲ್ಲಿ ಕೊಡಗು ಹಿಂದಿರಲು ಸಾಧ್ಯವಿಲ್ಲ. 'ಮಣಗಟ್ಟಿ ಮೂತಿಗಿಂಥಾ ಬೆನ್ನಿನಷ್ಟು ಕೃತಿಮೇಲು' ಎಂಬ ನಾಣ್ನುಡಿಯಂತೆ ಕೊಡಗಿನವರು ಮುಂದೆ ಬಂದು ಮುಂದಿರುವ ರಾಷ್ಟ್ರರಚನಾಕೃತಿಯಲ್ಲಿ ಭಾಗವಹಿಸಬೇಕು ಅದಕ್ಕೆ ಯೋಗ್ಯರಾದವರು ಅಂದರೆ ಹಿಂದೀ ಭಾಷೆಯ ಪೂರ್ಣಜ್ಞಾನವಿರುವವರು, ತಮ್ಮ ಸರ್ವಸ್ವವನ್ನೂ ರಾಷ್ಟ್ರಹಿತಕ್ಕಾಗಿ ತ್ಯಾಗಮಾಡುವೆನೆನ್ನುವವರು, ಜಗತ್ತಿನ ಆಗುಹೋಗುಗಳ ಸಾಕಷ್ಟು ಜ್ಞಾನವಿರುವವರು ಈ ಗ್ರಾಮ ಕೆಲಸಗಾರರ ತರಬೇತಿಗೆ ಮುಂದೆ ಬರಬಹುದು. ಈ ತರಬೇತು ಸೇವಾಗ್ರಾಮದಲ್ಲಿ, ಮಹಾತ್ಮಗಾಂಧಿಯವರ ಸನ್ನಿಧಿಯಲ್ಲಿ ನಾಲ್ಕು ವರ್ಷಗಳವರೆಗೆ ಪಡೆಯುವದು. ಅಲ್ಲದೆ ಇದೇ ತಾ. 22 ರಿಂದ ಮೂರುವಾರಗಳ ವರೆಗೆ ಕಸ್ತೂರ್‌ಬಾ ನಿಧಿಯ ಸಮಿತಿಯ ಕಾರ್ಯಕರ್ತರಿಗೂ, ಮತ್ತು ಆರುವಾರಗಳ ವರೆಗೆ ರಾಷ್ಟ್ರೀಯ ಶಾಲೆಯ ಮತ್ತು ವೈದ್ಯಕೀಯ ಪಥಕಗಳ ಶಿಕ್ಷಕರಾಗಲಿರುವವರಿಗೂ ತರಬೇತು ಸೇವಾ ಗ್ರಾಮದಲ್ಲಿ ಕೊಡಲಾಗುವದು. ಕೊಡಗು ಕಸ್ತೂರ್‌ಬಾ ನಿಧಿಯ ಸಮಿತಿಯವರು ಕೆಲವರನ್ನು ಮುಖ್ಯವಾಗಿ ಹೆಂಗಸರನ್ನು ತರಬೇತಿಗೆ ಕಳುಹಿಸಲು ನಿಶ್ಚಯಿಸಿರುವರೆಂದು ತಿಳಿಯ ಬಂದಿದೆ. ಆದ್ದರಿಂದ ಕೆಲಸ ಮಾಡಲು ಹುರುಪಿರುವ, ದೇಶಪ ಹಿತಕ್ಕಾಗಿ ಕಾತುರರಿರುವ, ಭಾರತಾಂಬೆಯ ಸೇವೆ ಮಾಡಲಿರುವ ಮಹಿಳೆ ಮಹನೀಯರು ಮುಂದೆ ಬರಬೇಕಾಗಿದೆ. ತಾವು ಭರತ ಖಂಡದಲ್ಲಿ ಹುಟ್ಟಿದ್ದನ್ನು ಸಾರ್ಥಕಗೊಳಿಸಬೇಕೆಂದಿರುವವರು, ಇಹದಲ್ಲಿ ಸ್ವಾತಂತ್ರ್ಯ ಪರದಲ್ಲಿ ಮೋಕ್ಷ ಪಡೆದು ಪಾವನರಾಗಲು ಮುಂದೆ ಬರಬೇಕು. ಕೊಡಗುನಾಡಿನಲ್ಲಿ ಇಂಥಾ ಸೇವಕರಿಗೆ ಕೊರತೆಯಿಲ್ಲ ವೆಂಬದನ್ನು ರುಜುಪಡಿಸಬೇಕಾಗಿದೆ.

ವರ್ತಮಾನ.

ತಾರೀಕು 3 ಮತ್ತು ನಾಲ್ಕರಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರದರ್ಶನದಲ್ಲಿ ಕೊಡಗಿನ ಕಿತ್ತಳೆ ಮೂರಾಟದ ಸಂಘವು ಪ್ರದರ್ಶಿಸಿದ ಕಿತ್ತಳೆ ಹಣ್ಣು, ಬಾಳೆ ಹಣ್ಣು ಮತ್ತು ಜೇನನ್ನು ವೈಸರಾಯ ದಂಪತಿಗಳು ನೋಡಿ ಪ್ರಶಂಸಿಸಿದರೆಂದೂ, ಅಲ್ಲಿದ್ದ ಕೊಡಗಿನ ಸಹಕಾರಿ ಇಲಾಖೆಯ ರಿಜಿಸ್ಟ್ರಾರವರು ಕೆಲವು ಕಿತ್ತಳೆ ಹಣ್ಣು ಮತ್ತು ಸ್ವಲ್ಪ ಜೇನನ್ನು ವೈಸರಾಯರ ಪತ್ನಿಗೆ ಒಪ್ಪಿಸಿದರೆಂದೂ, ಪ್ರದರ್ಶನದಲ್ಲಿ ಕೊಡಗಿನ ಕಿತ್ತಳೆ ಸಂಘವು ಬಹುಮೂನವಾಗಿ ಒಂದು ದೊಡ್ಡ ಬೆಳ್ಳಿಯ ಬಟ್ಟಲನ್ನು ಪಡೆಯಿತೆಂದೂ ತಿಳಿಯಬರುತ್ತದೆ.

ಶ್ರೀಮತಿಯರಾದ ಪಂದ್ಯಂಡ ಸೀತಾ ಬೆಳ್ಯಪ್ಪ, ಸಿ. ಎನ್. ಗೌರಮ್ಮ, ಪಟ್ಟಡ ದೇಚಮ್ಮ, ಮಿಸೆಸ್. ಪಾಂಡಂಡ ಸೋಮಪ್ಪ, ಶ್ರೀಯುತರುಗಳಾದ ಡಾ ನಂಜುಂಡೇಶ್ವರ, ಕೆ. ಸಿ. ಕರುಂಬಯ್ಯ, ಇವರುಗಳನ್ನು ಕಸ್ತೂರ್ ಬಾ ಸ್ಮಾರಕ ನಿಧಿಯ ಕಾರ್ಯಕಾರಿ ಮಂಡಳದ ಸದಸ್ಯರಾಗಿ ಆರಿಸಲಾಗಿದೆ.

ಆಹಾರ ಪರಿಷತ್ತಿನ ಸಂಬಂಧವಾಗಿ ದೆಲ್ಲಿಗೆ ಹೋಗಿದ್ದ ಚೀಫ್ ಕಮಿಷನರವರು ಈ ತಾ. 6ರಲ್ಲಿ ಕೊಡಗಿಗೆ ವಾಪಸು ಬಂದು ತಮ್ಮ ನಾಲ್ಕು ನಾಡು ಬಂಗ್ಲೆಗೆ ಹೋಗಿರುವರು. ತಾ. 9ರಲ್ಲಿ ಮಡಿಕೇರಿಗೆ ಬರಲಿರುವರು. ಇವರು ದೆಲ್ಲಿಯಲ್ಲಿ ಇದ್ದಾಗ ಇವರ ಕಿರಿಯ ಪುತ್ರಿಯು ತಾರೀಕು 28-1-45ರಲ್ಲಿ ಮೈಸೂರಿನಲ್ಲಿ ಶಿವಾಧೀನರಾದರು.

ತಾ. 8-2-45 ರಲ್ಲಿ ಮಡಿಕೇರಿಯಲ್ಲಿ ನಡೆದ ಕೊಡಗು ಕಸ್ತೂರ್ ಬಾ ಸ್ಮಾರಕ ನಿಧಿಯ ಸಭೆಯಲ್ಲಿ ಹನ್ನೆರಡು ಜನ ಸೂಲಗಿತ್ತಿಯರನ್ನು ಮತ್ತು ಎರಡು ಜನ 'ಹೆಲ್ತ್ ವಿಸಿಟರ್ಸ್'ಗಳನ್ನು ತರಬೇತುಮಾಡುವ ಯೋಜನೆಯನ್ನು ಒಪ್ಪಲಾಗಿದೆ.

ಸೋಮವಾರಪೇಟೆಯ ದಿವಂಗತ ತಮ್ಮಣ್ಣನವರ ಜ್ಞಾಪಕಾರ್ಥವಾಗಿ ಶ್ರೀ. ದಾಸಪ್ಪನವರು ಇಟ್ಟಿರುವ ಹಾಕಿಕಪ್ಪಿನ ಪಂದ್ಯಾಟವು ಕೊಡಗು ಎತ್ಲೆಟಿಕ್ ಸಂಘದ ಆಶ್ರಯದಲ್ಲಿ ನಡೆದು ತಾ. 7-2-45 ರಲ್ಲಿ ಕಡೇ ಆಟಕ್ಕೆ ನಿಂತ ದಕ್ಷಿಣ ಕೊಡಗಿನ 'ವೈಟ್ ಯೂನಿಯನ್' ಟೀಮನ್ನು ಮಡಿಕೇರಿಯ 'ವಾಂಡರರ್ಸ್ ಬ್ಲೂ' ಟೀಮಿನವರು ಸೋಲಿಸಿ ಬಟ್ಟಲನ್ನು ಪಡೆದರು.

1942 ರಲ್ಲಿ ನಡೆದ ಅಸ್ಟಿ ಮತ್ತು ಚಿಮೂರು ಕೇಸಿನ ಸಂಬಂಧ ಮರಣದಂಡನೆಗೆ ಗುರಿಮಾಡಲ್ಪಟ್ಟಿದ್ದ 15 ಜನರ ಪ್ರಾಣರಕ್ಷಣೆ ಮಾಡಬೇಕೆಂದು ದೇಶದ ಉದ್ದಗಲಕ್ಕೂ ಮನವಿಗಳು ಕಳುಹಿಸಲ್ಪಟ್ಟಂತೆ ಕೊಡಗಿನಿಂದಲೂ ಹಲವು ಜನರಿಂದ ಸಹಿ ಮಾಡಲ್ಪಟ್ಟ ಒಂದು ಮನವಿಯು ತಾ. 27-1-45 ರಲ್ಲಿ ಮಧ್ಯಸ್ಥಾಂತದ ಗವರ್ನರರಿಗೆ ಕಳುಹಿಸಲ್ಪಟ್ಟದಲ್ಲದೆ, ವೈಸರಾಯರಿಗೆ ಒಂದು ತಂತಿಯನ್ನೂ ಕಳುಹಿಸಲಾಗಿತ್ತು. ಶಿಕ್ಷೆಗೆ ಗುರಿಮಾಡಲ್ಪಟ್ಟ ಮೇಲ್ಕಂಡ ಮಹನೀಯರನ್ನು ಮರಣದಂಡನೆಗೆ ಗುರಿಮಾಡದೆ ಜೀವಾವಧಿ ಶಿಕ್ಷೆಗೆ ಇಳಿಸಿರುವದಾಗಿ ಇತ್ತಲಾಗಿ ತಿಳಿದು ಬಂದಿದೆ.

ಕೊಡಗು ನ್ಯಾಯವಿಧಾಯಕ ಸಭೆಯ ಬಜೆಟ್ ವಿಷಯವು ತಾ. 12.3.45 ರಲ್ಲಿ ನಡೆಯುವದು. ಕರಾವು ಕಳುಹಿಸಲು ಕಡೇ ತಾರೀಕು 28-2-45 ಎಂದು ನಿಶ್ಚಯಿಸಿದೆ.

ಕೊಡಗಿನಲ್ಲಿ ಡಿಸೆಂಬರ್ ತಿಂಗಳಲ್ಲಿ 210 ಜನನಗಳೂ 305 ಮರಣಗಳೂ ಸಂಭವಿಸಿವೆಯೆಂದು ಪ್ರಕಟವಾಗಿದೆ.

ತಾ. 4-2-45 ರಲ್ಲಿ ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ಕೊಡಗಿನ ಹೈಸ್ಕೂಲುಗಳ ವಾಕ್‌ಸ್ಪರ್ಧೆಯು ಮಡಿಕೇರಿ ಹೈಸ್ಕೂಲ್ ಹಾಲ್‌ನಲ್ಲಿ ನಡೆಯಿತು. ಸೋಮವಾರಪೇಟೆ ಹೈಸ್ಕೂಲಿನ ಶ್ರೀ. ಪುಟ್ಟಸ್ವಾಮಿಯವರಿಗೆ ಪ್ರಥಮ ಬಹುಮಾನವೂ, ಮಡಿಕೇರಿ ಹುಡುಗಿಯರ ಹೈಸ್ಕೂಲಿನ ಶ್ರೀಮತಿಯರಾದ ಕೆ. ಟಿ. ಬೋಜಮ್ಮ ಮತ್ತು ಎಂ. ಎಂ. ಮುತ್ತಮ್ಮ ನವರಿಗೆ ದ್ವಿತಿಯ ಮತ್ತು ತೃತಿಯ ಬಹುಮಾನಗಳೂ ದೊರೆತವು. ಆದೇ ದಿನ ಶ್ರೀ ಕೆ. ಪಿ. ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀ. ಎಂ. ಎಸ್. ಅನಂತ ಪದ್ಮರಾಯರು 'ಕನ್ನಡ ಹಬ್ಬದ' ವಿಚಾರ, ಶ್ರೀ. ಬಿ. ಡಿ. ಗಣಪತಿಯವರು 'ಕನ್ನಡ ಸಾಹಿತ್ಯ'ದ ವಿಚಾರ ಮತ್ತು ಶ್ರೀ. ಚಕ್ರದಾನ ಮೂರ್ತಿ ಬಿ. ಎ. ಇವರು 'ಶಿವಶರಣ ಸಾಹಿತ್ಯ'ದ ವಿಚಾರ ಭಾಷಣಮಾಡಿದರು.

ತಾ. 14-2-45 ರಿಂದ 20-2-45 ರ ವರೆಗೆ ಪ್ರತಿ ದಿನ ಸಾಯಂಕಾಲ 7 ಗಂಟೆಗೆ ಶ್ರೀ. ರಾಮಕೃಷ್ಣ ಜಯಂತಿಯ ನಿಮಿತ್ತ ಮಡಿಕೇರಿ ವೇದಾಂತಮಂದಿರದಲ್ಲಿ ಭಾಷಣ, ವಾಚನ, ಸಂಗೀತ, ಹರಿಕಥೆ ಮೊದಲಾದುವನ್ನು ಏರ್ಪಡಿಸಲಾಗಿದೆಯಂತೆ.

ತಿದ್ದುಪಡಿ

ಮುಜರಾಯಿ ಇಲಾಖಾ ಕಮಿಟಿಯೆಯಲ್ಲಿ ಖಾಲಿಬಿದ್ದಿರುವ ಸ್ಥಳದ ಚುನಾವಣೆಯು ತಾ. 21-2-45 ರಲ್ಲಿ ವೀರಾಜಪೇಟೆಯಲ್ಲಿ ಅಡಿಕೆ ನಂಜಪ್ಪನವರ ಛತ್ರದಲ್ಲಿ ಮಧ್ಯಾಹ್ನ 12 ಗಂಟೆಯಿಂದ 5 ಗಂಟೆಯ ವರೆಗೆ ನಡೆಯುವದು.

'ಜಪಾನು ಬೇಗನೆ ಶರಣು ಹೊಡೆಯದು'

ಅಮೇರಿಕಾದ 'ನ್ಯೂ ಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಜಾರ್ಜ್ ಎಕ್ಸೆಲ್‌ಸನ್ ಎಂಬುವವರು ಜಪಾನಿನಲ್ಲಿ 7 ವರ್ಷಗಳ ವರೆಗಿದ್ದ ಒಬ್ಬ ಪ್ರೆಯಿನ್ ದೇಶದ ಮಿಶನರಿಯ ಅಭಿಪ್ರಾಯವನ್ನು ಹೀಗೆ ಬರೆದಿದ್ದಾರೆ. 'ಪ್ರಥಮವಾಗಿ ನಾನು ಧೃಢಪಡಿಸಿ ಹೇಳುವದೇನಂದರೆ ಜಪಾನು ಶೀಘ್ರವಾಗಿ ಸೋಲಲಾರದು, ಜಪಾನೆಂದರೆ ಇಂಗ್ಲೆಂಡಿನಂತೆಯೇ ಒಂದು ದ್ವೀಪಸ್ತೋಮ. ಪ್ರತಿಯೊಂದೂ ಯುದ್ಧದೃಷ್ಟಿಯಿಂದ ಒಳ್ಳೆ ಅಯಕಟ್ಟಿನ ಸ್ಥಳದಲ್ಲಿವೆ. 1940-41 ರಲ್ಲಿ ಅಜೇಯವೆನಿಸಿದ್ದ ಜರ್ಮನ್ ಸೈನ್ಯಕ್ಕೆ ಹೇಗೆ ಇಂಗ್ಲೆಂಡನ್ನು ನುಗ್ಗುವದು ಅಸಾಧ್ಯವಾಯಿತೋ ಹಾಗೆಯೇ ಜಪಾನಿನ ದ್ವೀಪಗಳಿಗೆ ಕಾಲಿಡಲು ಮಿತ್ರರಾಷ್ಟ್ರದವರಿಗೆ ಅಸಾಧ್ಯ. ಕಳೆದ ಅನೇಕ ವರ್ಷಗಳಿಂದ ಈ ದ್ವೀಪಗಳ ರಕ್ಷಣೆಯು ಶಿಸ್ತಿನಿಂದ ಶಾಸ್ತ್ರೀಯ ರೀತಿ ನಡೆದಿದೆ. ಜಪಾನರಲ್ಲಿ ಯೆಚ್ಚಡ್ಡದಲ್ಲಿ ತಮಗೆ ಅಪಜಯವಾದೀತೆಂಬ ಭಾವನೆ ಕನಸಿನಲ್ಲಿಯೂ ಇಲ್ಲ. ಜಪಾನರಿಗೆ ತಮ್ಮ ವಿಮಾನಬಲದ ಮೇಲೆ ಹೆಚ್ಚು ನಂಬಿಕೆಯಿದೆ, ಮಿತ್ರರು ತಮ್ಮ ವಿಮಾನ ಧಾಳಿಗಳಿಂದ ಒಂದು ವೇಳೆ ಟೋಕಿಯೋ ನಗರವನ್ನು ನಾಶಪಡಿಸಿದರೂ ಅನೆಗೆ ನುಸಿ ಕಚ್ಚಿದಷ್ಟು ಇದರ ಪರಿಣಾಮವೂ. ಜಪಾನರ ಮೇಲಾಗಲಾರದೆಂದು ಅವರು ಭಾವಿಸಿದ್ದಾರೆ. ಯಾಕೆಂದರೆ ಜಪಾನಿನ ಯುದ್ಧಕಾರ್ಖಾನೆ ಮತ್ತಿತರ ಉತ್ಪಾದನಾ ವ್ಯವಸ್ಥೆ ಟೋಕಿಯೋದಲ್ಲಿ ಇಲ್ಲ. ಇಡೀ ದೇಶದ ಉದ್ದಗಲಕ್ಕೂ ಈ ಕೈಗಾರಿಕೆಗಳು ಹಬ್ಬಿವೆ. ಜಪಾನನ್ನು ಆಹಾರವಿಲ್ಲದೆ ತೊಂದರೆಗೀಡುಮಾಡಬಹುದೆಂಬುದೂ ಕನಸಿನ ಮಾತು. ಜಪಾನರು ಈಗೀಗ ಹೆಚ್ಚು ಹಾಲುಗೆಡ್ಡೆಯನ್ನು ಉಪಯೋಗಿಸುತ್ತಾರೆ. ಇದಕ್ಕಾಗಿ ಇದರ ವ್ಯವಸಾಯವೂ ವಿಶಾಲವಾಗಿ ನಡೆದಿದೆ. ಬತ್ತದ ಬೆಳೆಯು ಎಂದಿಗಿಂತಲೂ ಉತ್ತಮ ರೀತಿಯಲ್ಲಿದೆ. ತಿಂಗಳಿಗೆ ಮೂರುವಾರಗಳವರೆಗೆ ಅಕ್ಕಿಯನ್ನು ಮತ್ತೊಂದು ವಾರ ಹಾಲುಗೆಡ್ಡೆಯನ್ನು ಉಪಯೋಗಿಸಿ ಉಳಿದ ಅಕ್ಕಿಯನ್ನು ಮುಂದಿನ ಗಂಡಾಂತರ ಕಾಲಕ್ಕೆ ಇವರು ಶೇಕರಿಸಿಟ್ಟಿರುವರು. ಜಪಾನರಿಗೆ ಯೋಧರ ಅಭಾವವೂ ಇಲ್ಲ. ಜಪಾನಿನ ಜನನ ಸಂಖ್ಯೆ ಪ್ರತಿವರ್ಷಕ್ಕೆ 2 ಮಿಲಿಯದಂತೆ. ಆದ್ದರಿಂದ ಸೈನ್ಯಕ್ಕೆ ವರ್ಷಕ್ಕೆ ಒಂದು ಮಿಲಿಯ ಜನರು ದೊರೆಯುವರೆಂಬುದು ಸ್ವಯಂಸಿದ್ಧ. ಜಪಾನು ಯುದ್ಧಕ್ಕಿಳಿದ ಅಂದರೆ 1941 ರಿಂದ ಪ್ರತಿವರ್ಷ 1 ಮಿಲಿಯದಂತೆ 3 ಮಿಲಿಯ ಯೋಧರನ್ನು ತಯಾರಿಸಿಟ್ಟಿದೆ. ಈ ಹೊಸ ಸೈನಿಕರು ಹಳೆಯ ಸೈನಿಕರಷ್ಟೇ ದಕ್ಷರೂ, ಕಾರ್ಯಕುಶಲರೂ ಆಗಿರುವರು. ಜಪಾನರಿಗೆ ಸ್ವಲ್ಪ ನಷ್ಟವೂ ಆಗಿದೆ. ನೌಕಾಪಡೆಯಲ್ಲಿ ನಷ್ಟವಾಗಿದೆ. ಮಿತ್ರರು ನೌಕಾಮಾರ್ಗದಲ್ಲಿ ಯಶಸ್ವಿಯೂ ಆಗಿ ಅವರಿಗೆ ತೊಂದರೆಕೊಡುತ್ತಿದ್ದಾರೆ. ಮಿತ್ರರ ಈ ಯೋಜನೆಯು ಜಪಾನರ ಶಕ್ತಿಯನ್ನು ಕೆಲಮಟ್ಟಿಗೆ ಕುಂದಿಸಬಹುದಾದರೂ ಜಪಾನರನ್ನು ಸೋಲಿಸಲಾರದು. ಜಪಾನರಿಗೆ ಲೋಹಧಾತುಗಳ ಬಡ್ಡಿ ಅಭಾವವಿದೆಯೆಂದರೂ ಮುಂದೃಷ್ಟಿಯಿಂದ ಅವರು ಅಪಾರ ಲೋಹಧಾತುಗಳನ್ನು ಸಂಗ್ರಹಿಸಿಟ್ಟಿರುವರು. ಆದ್ದರಿಂದ ಜಪಾನು ಬೇಗನೆ ಶರಣಾಗತವಾದೀತೆಂಬುದು ತಪ್ಪು ಕಲ್ಪನೆ.'

PROSPECTUS.

(A Copy of this Prospectus has been filed with the Assistant Registrar of Joint Stock Companies, North Malabar, Tellichery, as required by Section 92 (2) of the Indian Companies Act VII of 1913)

(Consent of the Central Government has been obtained to this issue under the Defence of India Rule 94-A. It must be distinctly understood that in giving this consent the Government of India do not take any responsibility for the financial soundness of any scheme or for the correctness of the statements made or opinions expressed with regard to them.)

The subscription list will open on the 25th January 1945 and will close without notice.

NO PART OF THIS ISSUE HAS BEEN OR WILL BE UNDER-WRITTEN.

The Western India Plywoods, Limited.

(Incorporated in British India under the Indian Companies Act/1913)

AUTHORISED CAPITAL .... **15,00,000.**

Divided into 10,000 ordinary Shares of Rs. 100/-each and 5000; Five per cent Cumulative Preference Shares (free of British Income-tax) (of Rs. 100) each.

PRESENT ISSUE:-10,000 ordinary Shares of Rs. 100/- each and 5,000 Five per cent Cumulative Prefernce Shares of Rs. 100/- each. Of these, 3,852 fully paid-up Ordinary Shares to the value of Rs. 3,85,200/-are to be issued to the firmof TheWesternIndia Plywoods being the amount payable to the firm for the machinery and other moveables to be purchased from them, the shares to be allotted in the names of Vendor as well as other Partners of the firm and their nominees in the proportion of their investment in the said firm and 128 fully paid-up Ordinary Shares to the value of Rs. 12,800/-are to be issued to Arinhal Karuvantevalâpp l Kunhali Kutty Saheb being the value of lands to be purchased from him. The Directors and their friends have agreed to take 3000 ordinary Shares and 1000 Preference Shares. The remaining shares detailed below are now offered for public subscription.

3020 Ordinary Shares of Rs. 100/-each payable Rs 50/-per share with application and the balance of Rs. 50/-per share on allotment.

and

4000 Five per cent Cumulative Preference shares of Rs. 100/-each, payable Rs. 50/-per share with application and the balance of Rs. 50/-per share on allotment

The Preference Shares aforesaid shall confer on the holders the right to a fixed cummulative preferential dividend at the rate of five per cent per anumn, free of British Indian Income-tax on the capital for the time being paid thereon from the date of allotment and the right in any winding up to repayment of capital and arrears of dividend, whether earned or declared up to the commencement of winding up, in priority to the Ordinary Shares, but shall not confer any further right to participate in profits or assets.

DIRECTORS.

1. A. K. KUNHIMAYAN HAJI SAHFB BAHADUR, Merchant, Pannat, Uliyil post.
   Managing Director-The Muslim Printing and Publishing Co. Ltd , Tellicherry.
   Director:-The Kohinoor Saw Mill Co, Ltd , Baliapatam.
   ,, Timber and Trading Co., Ltd., ,,
   ,, Ayisha Hosiery Factory Ltd., Palaparamba.
   ,, Tellicherry Tiles Company, Ltd., Pinarayi.
2. C. SAMUEL AARON, ESQ , Merchant, Pappinisseri.
   Managing Director: -The Aaron Spinning and weaving Mills, Ltd , Pappinisserri.
   Director:-The Shoranur Metal Industries, Ltd., Shoranur.
3. KHAN BAHADUR HAJEE V. ALY BARAMY SAHEB BAHADUR, Merchant, Calicut.
   Managing Director:-The Kohinoor Saw Mill Co., Ltd., Baliapatam.
   Director:-The Kerala Timber Supply Corporation, Ltd., Kallai.
4. V. L. VENUGOPAL, ESQ, Merchant, 'Villa Approach', San Thome High Road, Mylapore, Madras.
   Managing Director:-The Standard Tile and Clay Works, Ltd., Feroke.
   Director:-The Karnatak Industrial and Plywood Co., Ltd., Supa.
   ,, The Standard Furniture Co , Ltd , Kallai.
   ,, Stoneware Pipes (Madras) Ltd., Bombay.
   ,, Vijaya Tiles, Ltd., Colombo.
   ,, Indian Sugars and Refineries, Ltd., Hospet.
   ,, Vilupuram Industries, Ltd., Villupuram.
   ,, Standard Button works (Madras) Ltd.
   ,, Balakrishna Saw Mills Ltd., Feroke.
5. JOHN KURUVILLA ESQ, Merchant, Chalakudi.
   Director:-The Kerala Timber Supply Corporation, Ltd , Kallai.
   ,, Annamalai Timber trust, Ltd., Chalakudi.
6. KAYIATH DAMODARAN ESQ., Merchant, Cannanore.
   Director;-Timber and Trading Co., Ltd., Baliapatam.
7. A. K. KUNHALIKUTTY SAHEB BAHADUR, Merchant, Pannat, uliyil.
   Director:-Timber and Trading Co., Ltd., Baliapatam.
8. PURUSHOTHAM GOCULDAS SAIT, EQR, Merchant and Banker, Cannanore.
9. A. K. KADERKUTTY SAHEB BAHADUR, M. L. A., Merchant, Pannat, Uliyil.
   Managing Director:-Timber and Trading Co., Ltd., Baliapatam.
   Director:-Malabar Timber and Saw Mill Co., Ltd., ,,
   ,, Ayisha Hosiery Factory, Ltd., Palaparamba,
   ,, The Aaron Spinning and Weaving Mills, Ltd., Pappinisserri.
   ,, Kohinoor Saw Mill Co., Ltd., Baliapatam.
   ,, The Muslim Literature Society Ltd., Tellicherry
   ,, The Kerala Timber Supply Corporation Ltd., Kallai

Managing Director:-

A. K Kader Kutty Saheb Bahadur, M. L. A., Pannat, Uliyil

Bankers:-

The INDIAN BANK Ltd., Cannanore.
The INDIAN OVERSEAS BANK Ltd., Cannanore.

Leagal Advisers:-

Sri G. Damodara Rao, B. A., B. L., Advocate, Tellichery.
Sri R. Lakshmana Iyer, B. A., B. L., Adovcate, Calicut.

Auditors:-

Messers. K. K. Thampan and Co., Registered Accountants and Auditors, Calicut. and
Messers. T. K. Menon and Co., Registered Accountants and Auditors, Calicut.

Registered Office:-

Mill Road, BALIAPATAM (North Malabar)

Objects:-The Company has been formed generally for the purpose of carrying on all or any of the objects set forth in the Memorandum of Association which is annexed hereto and forms part of this prospectus and in particular to

engage in the manufacture and marketing of plywoods and veneers of all sizes. ....

The property proposed to be acquired for erecting the factory was purchased by Mr. A K. Kunhali Kutty for Rs. 12,000/- from the prior owners on the 10th July 1944. Mr. A. K. Kunhali Kutty has since taken a direct renewed lease from the Jenmi for a term of 12 years as and from 27th July 1944, authorising the lessee to erect factory buildings to instal machinery and to use the premises for running a Mill. For the renewal of the lease, a sum of Rs. 800/-was spent by him and he is conveying the property to the Company for his actual cost, namely Rs 12,800/.

Prospectus:-There is a great demand for veneer and plywoods now on account of fall in imports due to war conditons. Researches have shown that these can be successfully utilised wherever lightness and strength rare required in wood work. The directors feel that even in the post war period, demand from home markets would be considerable on account of their utility for various industrial purposes and modern building construction and house furnishing. ....

The Directors feel that it would be possible to complete the erection of the machineries and necessary buildings within six months and the Directors hope that the Company would be able to pay dividend even from the first year of its working.

Directors' Qualification and Remuneration:—The Qualification of a director other than the Ex-officio director shall be the holding on his own name of shares of the nominal value of Rs 10,000/-. The articles provide that every director including the Ex-Officio director shall be paid out of the funds of the company as remuneration for his service the sum of Rs. 50/-for every meeting of the Directors at which he shall be present in person irrespective of the number of days which the meeting may continue consecutively. He shall also in addition be entitled to be paid travelling allowance on the basis of first class fare as also reasonable boarding and hotel charges for attending such meetings.

The managing Director who is also an Ex-Officio director of the Company shall also be entitled to the like fee and expenses over and above the remuneration payable to him. The managing Director shall not be liable to retirement, nor shall he be liable to be removed by an extraordinary resolution of the Company.

Interest of Directors:-Of the directors, Messers. A. K Kunhi Mayan Haji Saheb Bahadur, C. Sumuel Aaron, A. K. Kader Kutty Saheb, Khan Bahadur Haji V. Aly Baramy and A. K. Kunhalikutty Saheb are the partners of the firm of messers. The Western India Plywoods, Baliapatam, from whom the machinery and other movaables for purposes of the factory are proposed to be acquired. Mr. A. K. Kunahalikutty is also the Vendor of the immovable property proposed to be acquired by the company for erecting the factory building and other appurtenances. Mr. A. K. Kader Kutty is to be the managing Director (Managing Agent) of the Company for a term of twelve years.

Management:-Subject to the supervision and control by the Board of Directors, the management of the affairs of the company will be in the hands of a Managing Director. Mr. A. K. Kader Kutty shall be the first Managing Director of the company and he shall hold office for a term of twelve years from the date of incorporation of the company. The said Mr. A. K. Kader Kutty has been appointed Managing Director under the Articles of Association of the company and the company is to enter into an agreement with him appointing him. Managing Director in terms of a draft Agreement which for purposes of identification has been subscribed by Mr. Lakshmana Iyer, Advocate. Calicut.

The Managing Director Mr. A. K. Kader Kutty shall be entitled to a monthly remuneration of Rs. 1000/- from the date of incorporation of the company. He shall also be itled to an additional remuneration by way of commission at the rate of 7½ per cent of the net profits of the company in any year in which the net profits earned shall not be less than 5% of the paid up capital of the company at the end of the year, such net profits to be calculated as per provisions contained in Section 87-C of the Indian Companies Act, 1913.

Prelemiuary Expenses:-The company is to meet the preliminry expences which are not likely to exceed a sum of Rs. 15,000/-

Minimum Subscription:-The minimum subscription on which the directors may proceed to allotment is Rs. 3,00,000.

Voting Rights:-1. Every holder of ordinary shares in the Company shall be entitled to one vote on a show of hands and one vote for every ordinery share held by him in the event of a poll.

2. No member holding preference shares in the Company is entitled to any vote in any meeting of the share holders of the Company unless the cumulative preferential dividend of 5% fixed by Article 8 is not paid in any two consecutive years. ....

Applications for shares are to be made in the forms attached here to and forwarded with the application money of Rs. 50/- per share to the Registered Office of the Company or to the Company's bankers. ....

Copies of the Prospectus and application for shares can be had from the Registered Office of the Company as well as from the Bankers of the Company.

Baliapatam, dated the 16th day of January 1945.

1. (Signed) A. K. Kunhi Mayan Hajee.
2. ,, C. Samuel Aaron,
3. ,, H. V. Aly Baramy.
4. ,, V. L. Venugopal.
5. ,, E. John Kuruvilla.
6. ,, Kayiath Damodarn.
7. ,, A. K. Kunhalikutty.
8. ,, Purushotham Goculdas.
9. ,, A. K. Kader Kutty.

No..... *Application for Ordinary / Preference Shares.*

The Western India Plywoods, Limited.

(Incorporated in British India under the Indian Companies Act, 1913)

Registered office: MILL ROAD, BALIAPATAM, S. MALABAR.

Athorised Capital 15,00,000

Divided into 10,000 Ordinary shares of Rs. 100/-each and 5,000 Five per cent Cumulative Preference Shares (free of British Indian Income-tax) of Rs. 100/- each.

ISSUE OF $\frac{\text{10,000 Ordinary}}{\text{5,000 Preference}}$ Shares Rs. 100/- each.

Payable as follows:-Rs. 50/- per share with application and Rs. 50/- per share on Allotment.

TO

THE WESTERN INDIA PLYWOODS, LIMITED
MILL ROAD, BALIAPATAM.

GENTLEMEN,

I/We hereby request you to allot to me/us.....Ordinary/ Preference Shares of Rs. 100/- each in the above named company, and I/We agree to accept such shares or any smaller number yo may allot to me/us, subject to the provisions of the Memorandum and Articles of Association of the company. I/We send herewith Rs.....being the amount payable on application for.....shares applied for. I/We agree to pay the balance of Rs. 50/-per share on allotment and I/We authorise you to place my/our name on the Register of Members in respect of the shares allotted to me/us.

Name in Full.....

Father's name.....

Occupation.....

Address.....

Date.....1945. Yours faithfully,

Signature.